# ವಿನೋದ ಮಾತಿನ ವಿವಾದ ಪುರುಷ



■ ಪ್ರವೀಣ ಕುಲಕರ್ಣಿ

ಕುನಾಲ್ ಕಾಮ್ರಾ! ದೇಶದ ಹಲವು ರಾಜಕಾರಣಿಗಳ ನಿದ್ದೆಗೆಡಿಸಿದ, ಅವರ ಬೆಂಬಲಿಗರನ್ನೂ ರೊಚ್ಚಿಗೆಬ್ಬಿಸಿದ ಹೆಸರು. ಕುನಾಲ್‌ಗೆ ವಿವಾದಗಳ ಮೇಲೆ ಎಷ್ಟೊಂದು ಪ್ರೀತಿಯೆಂದರೆ ಅವರ ಹೆಸರನ್ನು ವಿವಾದಕುಮಾರ್ ಕಾಮ್ರಾ ಎಂದು ಬದಲಾಯಿಸುವುದು ಒಳಿತು ಎಂಬಂತಹ ಕುಹಕದ ಮಾತುಗಳೂ ಕೇಳಿಬರುತ್ತಿವೆ. ದೇಶದಾದ್ಯಂತ ಸದ್ದು ಮಾಡಿರುವ ಈ ಹಾಸ್ಯ ಕಲಾವಿದ (ಸ್ಟ್ಯಾಂಡ್ ಅಪ್ ಕಾಮಿಡಿಯನ್) ರಾಜಕೀಯ ವಿಡಂಬನೆಗಳಿಗೆ ಹೆಸರುವಾಸಿ. ತಮಗೆ ಅನಿಸಿದ್ದನ್ನು ಯಾವುದೇ ಹಿಂಜರಿಕೆಯಿಲ್ಲದೆ, ಪರಿಣಾಮವನ್ನೂ ಲೆಕ್ಕಿಸದೆ, ಜೋರು ಧ್ವನಿಯಲ್ಲಿ ಹೇಳುವ ವ್ಯಕ್ತಿ. ಅಂತಹ ಹೇಳಿಕೆಗಳಿಂದಾಗಿಯೇ ಕಾನೂನು ಸಂಕಷ್ಟ ಎದುರಿಸಿದ, ಸಾಮಾಜಿಕ ಜಾಲತಾಣಗಳಲ್ಲಿ ಪರ–ವಿರೋಧದ ಅಲೆಗಳನ್ನು ಎಬ್ಬಿಸಿದ ಸೆಲೆಬ್ರಿಟಿಯೂ ಹೌದು. ರಾಜಕಾರಣಿಗಳ ಕುರಿತಾಗಲಿ, ನ್ಯಾಯಾಂಗ ವ್ಯವಸ್ಥೆಯ ಕುರಿತಾಗಲಿ, ಮಾಧ್ಯಮಗಳು ಸೃಷ್ಟಿಸುವ ಸಂಕಥನಗಳ ಕುರಿತಾಗಲಿ ಕಾಮ್ರಾ ಬಾಯಿ ತೆರೆದರೆಂದರೆ ಅದು ಪತ್ರಿಕೆಗಳ ಮುಖಪುಟದ ಸುದ್ದಿ ಎಂತಲೇ ಲೆಕ್ಕ. ಕೆಲವೊಮ್ಮೆ ಅವರ ಜೋಕುಗಳೇ ಸುದ್ದಿಯಾದರೆ, ಮತ್ತೆ ಕೆಲವೊಮ್ಮೆ ಆ ಜೋಕುಗಳು ಎಬ್ಬಿಸಿದ ಪ್ರತಿರೋಧದ ಅಲೆಗಳು ಸುದ್ದಿಯ ವಸ್ತುಗಳಾಗುವುವು.

ಕುನಾಲ್, ತಮ್ಮ 'ನಯಾ ಭಾರತ್' ಸರಣಿಯ ಇತ್ತೀಚಿನ ಕಂತಿನಲ್ಲಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಗುರಿಯಾಗಿಸಿಕೊಂಡು ಮಾಡಿದ ವಿಡಂಬನೆ ಈಗ ಸದ್ದು ಮಾಡುತ್ತಿದೆ. ಕುನಾಲ್ ಬಳಸಿದ ಗದ್ದಾರ್ (ದ್ರೋಹಿ) ಎಂಬ ಪದ ವಿವಾದದ ಕಿಚ್ಚು ಹಚ್ಚಿದೆ. ಕಂತಿನ ಚಿತ್ರೀಕರಣ ನಡೆದ ಸ್ಟುಡಿಯೊದಲ್ಲಿ ಶಿಂದೆ ಬೆಂಬಲಿಗರು ದಾಂದಲೆ ನಡೆಸಿದ್ದಾರೆ. ಐದು ನೂರಕ್ಕೂ ಅಧಿಕ ಬೆದರಿಕೆ ಕರೆಗಳೂ ಕುನಾಲ್ ಅವರಿಗೆ ಬಂದಿವೆಯಂತೆ.

ಮುಂಬೈನಲ್ಲಿ ಹುಟ್ಟಿ ಬೆಳೆದ ಕುನಾಲ್, ಬಿ.ಕಾಂ ಪದವಿಯನ್ನು ಅರ್ಧಕ್ಕೆ ಮೊಟಕುಗೊಳಿಸಿದವರು. ಸಿನಿಮಾ ನಿರ್ಮಾಣ ಕಂಪನಿಯೊಂದರಲ್ಲಿ ಸಹಾಯಕನಾಗಿ ಕೆಲಸಕ್ಕೆ ಸೇರಿದ ಅವರು, ಅಲ್ಲಿ ಹನ್ನೊಂದು ವರ್ಷ ಕೆಲಸ ಮಾಡಿ, ಆ ಕಂಪನಿಯಿಂದ ಹೊರಬಿದ್ದರು. 2013ರಲ್ಲಿ ಮುಂಬೈನ ಕ್ಯಾನ್ವಾಸ್ ನಗೆಕೂಟದಲ್ಲಿ ಅವರು ಮೊದಲ ಹಾಸ್ಯ ಕಾರ್ಯಕ್ರಮ ನೀಡಿದರು. ಅಲ್ಲಿಂದ ನಿಧಾನಕ್ಕೆ ಒಂದೊಂದಾಗಿ ಕಾರ್ಯಕ್ರಮ ನೀಡುತ್ತಾ, ತಮ್ಮ ವಿಡಂಬನೆಯ ಮಾತುಗಾರಿಕೆಗೆ ಹೆಸರು ಮಾಡುತ್ತಾ ಹೊರಟರು. 2017ರಲ್ಲಿ ಕುನಾಲ್ ಅವರು ತಮ್ಮ ಕಾರ್ಯಕ್ರಮವೊಂದರ ಕ್ಲಿಪಿಂಗ್ ಅನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದರು. ವಿವಾದದೊಂದಿಗೇ ಸಾಮಾಜಿಕ ಜಾಲತಾಣಿಗರು ಅವರನ್ನು ಬರಮಾಡಿಕೊಂಡರು. ನಿತ್ಯ ಬದುಕಿನ ಅಸಂಗತಗಳು, ಕಾರು ಚಾಲಕರ ಪೇಚಿನ ಪ್ರಸಂಗಗಳು, ಅವಿವಾಹಿತರ ಬದುಕಿನ ಅನುಭವಗಳು ಮತ್ತು ಟಿ.ವಿ ಜಾಹೀರಾತುಗಳು ಸಹ ಅವರ ಹಾಸ್ಯದ ವಸ್ತುಗಳಾಗಿವೆ. ಆದರೆ, ಆಗೊಮ್ಮೆ, ಈಗೊಮ್ಮೆ ಟೆನಿಸ್‌ನ ಏಸ್‌ನಂತೆ ಕುನಾಲ್ ಸಿಡಿಸುವ ರಾಜಕೀಯ ಇಲ್ಲವೆ ಸಿದ್ಧಾಂತಕ್ಕೆ ಸಂಬಂಧಿಸಿದ ವಿಡಂಬನೆಗಳು ದೇಶದ ತುಂಬಾ ಸದ್ದು ಮಾಡುತ್ತಿವೆ.

'ಸ್ವಾತಂತ್ರ್ಯ ಎಂಬುದು ನಿಯಂತ್ರಣವಿಲ್ಲದ ವರ್ತನೆಯಾಗಬಾರದು... ಜನರು ಗೌರವಿಸುವ ಹಿರಿಯ ನಾಯಕರನ್ನು ಅಗೌರವದಿಂದ ಕಾಣಲು, ಕೀಳುಮಟ್ಟದ ಹಾಸ್ಯ ಮಾಡಲು ಯಾರಿಗೂ ಹಕ್ಕಿಲ್ಲ' ಎನ್ನುವುದು ಕುನಾಲ್ ಅವರ ರಾಜಕೀಯ ವಿಡಂಬನೆಯನ್ನು ವಿರೋಧಿಸುವವರ ಮಾತು. 'ಹಾಸ್ಯವೆಂಬುದು ಸಮಾಜವು ತನಗೆ ತಾನೇ ಹಿಡಿದುಕೊಳ್ಳುವ ಕನ್ನಡಿ. ಅದನ್ನು ಸಹಿಸಲು ಆಗದೇ ಇರುವುದು ಸರ್ವಾಧಿಕಾರದ, ಅನಾರೋಗ್ಯಕರ ಸಮಾಜದ ಲಕ್ಷಣ. ಹಾಸ್ಯವನ್ನು ಹಾಸ್ಯವಾಗಿ ಸ್ವೀಕರಿಸಲು ಆಗುತ್ತಿಲ್ಲ ಎಂಬುದನ್ನು ಈಗಿನ ಬೆಳವಣಿಗೆಗಳು ತೋರಿಸಿಕೊಡುತ್ತಿವೆ' ಎಂಬುದು ಕುನಾಲ್ ಅವರ ಮಾತನ್ನು ಸಮರ್ಥಿಸುವವರ ಹೇಳಿಕೆ. ಈ ಹಾಸ್ಯ ಕಲಾವಿದ ಮಾತ್ರ ಆಡಿದ ಯಾವ ಮಾತಿಗೂ ಕ್ಷಮೆ ಕೇಳುವುದಿಲ್ಲ ಎಂದು ಗಟ್ಟಿಯಾಗಿ ಹೇಳಿದ್ದಾರೆ.

ಕುನಾಲ್ ಅವರ ಬೆನ್ನುಬಿದ್ದಿರುವ ವಿವಾದವು ವಿಕ್ರಮಾದಿತ್ಯನ ಬೇತಾಳದಂತೆ ಕೆಳಗೆ ಇಳಿಯಲೊಲ್ಲೆ ಎನ್ನುತ್ತಿದೆ. 'ಶಟ್ ಅಪ್ ಯಾ ಕುನಾಲ್' ಎಂಬ ಯೂಟ್ಯೂಬ್ ಪಾಡ್‌ಕಾಸ್ಟ್ ಆರಂಭಿಸಿದ್ದ ಅವರು ರಾಜಕಾರಣಿಗಳು, ಚಳವಳಿಗಾರರು, ಸಾರ್ವಜನಿಕ ರಂಗದ ವ್ಯಕ್ತಿಗಳನ್ನು ಮಾತನಾಡಿಸಿದ್ದರು. ಕನ್ಹಯ್ಯ ಕುಮಾರ್, ಉಮರ್ ಖಾಲಿದ್, ತೇಜಸ್ವಿ ಸೂರ್ಯ ಅಂಥವರನ್ನೆಲ್ಲ ಕರೆದು ಚರ್ಚೆ ನಡೆಸಿದ್ದರು. ಆಗಲೂ ಅವರ ಕೆಲವು ಮಾತುಗಳು ವಿವಾದದ ದೂಳು ಎಬ್ಬಿಸಿದ್ದವು.

ಪತ್ರಕರ್ತ ಅರ್ನಾಬ್ ಗೋಸ್ವಾಮಿ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿದ್ದ ಅವರು, ನ್ಯಾಯಾಂಗ ನಿಂದನೆ ಪ್ರಕರಣ ಎದುರಿಸಿದ್ದರು. ಕ್ಷಮೆ ಕೋರಲು ನಿರಾಕರಿಸಿ, 'ನನ್ನ ವಾಕ್ ಸ್ವಾತಂತ್ರ್ಯವನ್ನು ನಾನು ಬಳಸಿದ್ದೇನೆ' ಎಂದು ಹೇಳಿದ್ದರು. ಸುಪ್ರೀಂ ಕೋರ್ಟ್ ಅನ್ನು ಬ್ರಾಹ್ಮಣ–ಬನಿಯಾಗಳ ಕೂಟ ಎಂದೂ ಟೀಕಿಸಿದ್ದರು. ಆಗ ಬಂದ ಪ್ರತಿರೋಧಕ್ಕೂ ಅವರು ಸೊಪ್ಪು ಹಾಕಿರಲಿಲ್ಲ. ವಿಮಾನ ನಿಲ್ದಾಣದಲ್ಲಿ ಸಿಕ್ಕ ಅರ್ನಾಬ್ ಅವರನ್ನು ನಿಮ್ಮದು ಯಾವ ಸೀಮೆಯ ಪತ್ರಿಕೋದ್ಯಮ ಎಂದು ಪ್ರಶ್ನಿಸಿದ್ದರು. ಆ ಘಟನೆಯ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳಲ್ಲಿಯೂ ಹಾಕಿದ್ದರು. ಆಗ ನಡೆದ ಗಲಾಟೆಯ ಕಾರಣಕ್ಕೆ ಹಲವು ವಿಮಾನಯಾನ ಸಂಸ್ಥೆಗಳು ಅವರ ಪ್ರಯಾಣದ ಮೇಲೆ ನಿರ್ಬಂಧ ಹೇರಿದ್ದವು. ಸಾರ್ವಜನಿಕ ಆರೋಗ್ಯಕ್ಕಿಂತ ರಾಜಕೀಯ ರ‍್ಯಾಲಿಗಳೇ ಮೋದಿ ಸರ್ಕಾರಕ್ಕೆ ಮುಖ್ಯವಾಗಿವೆ ಎಂದೂ ಅವರು ಟೀಕಿಸಿದ್ದರು. ಚುನಾವಣಾ ಆಯೋಗವನ್ನೂ, 'ಇವಿಎಂ'ಗಳ ಬಳಕೆಯನ್ನೂ ಅವರು ಪದೇ ಪದೇ ನಿಕಷೆಗೆ ಒಳಪಡಿಸಿದ್ದರು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರತ್ತಲೂ ಕುನಾಲ್ ಅವರ ವಿಡಂಬನೆಯ ಬಾಣ ತೂರಿಹೋಗಿದ್ದುಂಟು. ಹಾಸ್ಯದ ಮೂಲಕ ಕೆಣಕುವ, ಬಾಯಿ ಮುಚ್ಚಿಸಲು ಹೋದರೆ ಮತ್ತಷ್ಟು ದೊಡ್ಡದಾಗಿ ಧ್ವನಿ ಎತ್ತುವ ಕುನಾಲ್ ಅವರ 'ನಯಾ ಭಾರತ್' ಬತ್ತಳಿಕೆಯಲ್ಲಿ ಇನ್ನೂ ಯಾವ, ಯಾವ ಬಾಣಗಳಿವೆಯೋ? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65